**ಅಪರ** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ

ನ್ಯಾಯಾಲಯ, ಆಳಂದ.

ಸಿ.ಸಿ.ನಂ**:182:2016**

ಸಿ.ಡಬ್ಲ್ಯೂ-೧ ಪಿ.ಡಬ್ಲ್ಯೂ-೧

| | | |
|---|---|---|
| ಹೆಸರು | : | ಪ್ರಹ್ಲಾದ |
| ತಂದೆ:ಗಂಡ | : | ಶ್ಯಾಮರಾವ ಪಾಟೀಲ್ |
| ವಯಸ್ಸು | : | ೫೮ ವರ್ಷ |
| ಉದ್ಯೋಗ | : | ಡೆಪ್ಯೂಟಿ ಮ್ಯಾನೇಜರ |
| ವಾಸಸ್ಥಳ | : | ಬೆಂಗಳೂರು |

ದಿನಾಂಕ:೧೪.೦೨.೨೦೧೮

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ :**

ನಾನು ಜುಲೈ ೨೦೧೨ ರಿಂದ ಡಿಸೆಂಬರ ೨೦೧೪ ರವರೆಗೆ ಎಸ.ಬಿ.ಐ ನ ಬ್ಯಾಂಕನ ಕಡಗಂಚಿ ಶಾಖೆಯಲ್ಲಿ ಮ್ಯಾನೇಜರ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ.೧೨.೧೦.೨೦೧೨ ರಂದು ನಾನು ಬ್ಯಾಂಕಿನ ಕೆಲಸಗಳನ್ನು ಮುಗಿಸಿ ಸಂಜೆ ೬.೪೫ ರ ಹೊತ್ತಿಗೆ ಶಾಖೆಯನ್ನು ಮುಚ್ಚಿ ನನ್ನ ಮನೆಗೆ ಹೋಗಿರುತ್ತೇನೆ. ಮಾರನೆ ದಿನ ದಿ.೧೩.೧೦.೨೦೧೨ ರಂದು ಬೆಳಿಗ್ಗೆ ೯.೪೫ ರಿಂದ ೧೦.೦೦ ಗಂಟೆ ಸುಮಾರಿಗೆ ಬ್ಯಾಂಕಿನ ಕೀಲಿಯನ್ನು ತೆಗೆದು ನೋಡಿದಾಗ ಗಾಜುಗಳೆಲ್ಲ ಒಡೆದಿದ್ದವು, ವೈರುಗಳು ಚೆಲ್ಲಾಪಿಲ್ಲಿಯಾಗಿ ಕೆಳಗಡೆ ಬಿದಿದ್ದವು. ಬ್ಯಾಂಕಿನ ಹಿಂದಿನ ಬಾಗಿಲನ್ನು ಒಡೆದು ತೆರೆಯಲಾಗಿತ್ತು. ಬ್ಯಾಂಕಿನ ಸ್ಥಿತಿಯನ್ನು ನೋಡಲಾಗಿ ಯಾರು ಒಳಗೆ ನುಗ್ಗಿದ್ದಾರೆ ಎಂದು ಅನಿಸಿ ತಕ್ಷಣ ಸ್ಟ್ರಾಂಗ ರೂಮಿಗೆ ಹೊದೆ. ಸದರಿ ಸ್ಟ್ರಾಂಗ ರೂಮಿನ ಬಾಗಿಲು ಯಥಾಸಿಸ್ಥಿಯಲ್ಲಿತ್ತು. ಆದರೆ ಸ್ಟ್ರಾಂಗ ರೂಮಿನ ಹಿಂಭಾಗದಲ್ಲಿ ದೊಡ್ಡ ಕಿಂಡಿಯಾಗಿತ್ತು. ಕಿಂಡಿಮೂಲಕ ನೋಡಿದಾಗ ಸ್ಟ್ರಾಂಗ ರೂಮಿನ ಅಲಮಾರಿಗಳು ಚೆಲ್ಲಾಪಿಲ್ಲಿಯಾಗಿ ಬಿದಿದ್ದವು. ಅಲಮಾರಿಗಳು ತೆರೆದಂತೆ ಕಾಣಿಸುತ್ತಿದ್ದವು. ಒಂದು ಅಲಮಾರಿಯಲ್ಲಿ ನಗದು ಹಣ ಇನ್ನೊಂದು ಅಲಮಾರಿಯಲ್ಲಿ ಚಿನ್ನವನ್ನು ಇಟ್ಟಿದ್ದೆವು. ಸದರಿ ಅಲಮಾರಿಗಳು ತೆರೆದಿದ್ದವು. ತಕ್ಷಣ ನಾನು ಪೋಲಿಸರಿಗೆ ಕರೆಮಾಡಿ ಸದರಿ ವಿಷಯವನ್ನು ತಿಳಿಸಿದೆನು. ನಂತರ ಪೋಲಿಸರು ಬ್ಯಾಂಕಿಗೆ ಬಂದಿರುತ್ತಾರೆ. ಪೋಲಿಸರ ಸಮಕ್ಷಮದಲ್ಲಿ ಸ್ಟ್ರಾಂಗ ರೂಮನ ಬಾಗಿಲನ್ನು ತೆಗೆದು ನೋಡಲಾಗಿ ಅಲಮಾರಿಗಳು ಪೂರ್ತಿ ತೆರೆದಿದ್ದವು. ನಗದು ಹಣ ಮತ್ತು ಚಿನ್ನ ಇಟ್ಟಿದ್ದ ಅಲಮಾರಿಗಳು ಖಾಲಿಯಾಗಿದ್ದವು.

ಸದರಿ ನಗದು ಇಟ್ಟಿದ್ದ ಅಲಮಾರಿಯಲ್ಲಿ ೪೬,೪೦,೩೯೨ ರೂ. ನಗದು ಹಣ ಮತ್ತು ಚಿನ್ನ ಇಟ್ಟಿದ್ದ ಅಲಮಾರಿಯಲ್ಲಿ ೪,೫೦೦ ಗ್ರಾಂ ಚಿನ್ನ ಕಳುವಾಗಿತ್ತು. ಸದರಿ ಚಿನ್ನದ ಅಂದಾಜು ಕ್ಕಿಮ್ಮತ್ತು ಒಂದು ಕೋಟಿ ಮೂವತ್ತೆರಡು ಲಕ್ಷ ಆಗಬಹುದು.

ಪೋಲಿಸರು ಶ್ವಾನ ದಳವನ್ನು, ಫಿಂಗರ ಪ್ರೀಂಟ ಎಕ್ಸಪರ್ಟಗಳನ್ನು ಕರೆಸಿದ್ದರು.  ಬ್ಯಾಂಕನ್ನು ಪರಿಶೀಲನೆ ಮಾಡಿರುತ್ತಾರೆ.

ಬ್ಯಾಂಕಿನಕಲ್ಲಿ ಪೋಲಿಸರಿಗೆ ಪಿರ್ಯಾದಿಯನ್ನು ನೀಡಿರುತ್ತೇನೆ.  ಸದರಿ ಪಿರ್ಯಾದಿಯನ್ನು ಈಗ ನೋಡುತ್ತಿದ್ದೆನೆ.  ಅದನ್ನು ನಿಪಿ-೧ ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು.  ಪಿರ್ಯಾದಿ ನೀಡಿರುವ ಹೊತ್ತಿಗೆ ಮಧ್ಯಾಹ್ನ ೩.೦೦ ಗಂಟೆಯಾಗಿರುತ್ತದೆ.

ಅದೇ ದಿನ ಸಿ.ಪಿ.ಐ ಆಳಂದ ಇವರು ಸಂಜೆ ೬.೦೦ ರಿಂದ ೭.೦೦ ಗಂಟೆಗೆ ಪಂಚರ ಸಮಕ್ಷಮ ಬ್ಯಾಂಕಿನ ಪಂಚನಾಮೆಯನ್ನು ಮಾಡಿರುತ್ತಾರೆ.  ಪಂಚನಾಮೆ ಕಾಲಕ್ಕೆ ಪೋಲಿಸರು ಕಬ್ಬಿಣದ ಕೊಯಿತಾ, ಬಡಿಗೆ, ಒಡೆದ ಸಿಸಿ ಕ್ಯಾಮರಾ, ಕಬ್ಬಿಣದ ರಾಡು, ಒಂದು ಹಾರನ, ಒಡೆದ ಗೊಡೆ ಚೂರುಗಳನ್ನು ವಶಪಡಿಸಿಕೊಂಡಿರುತ್ತಾರೆ.

ಪೋಲಿಸರು ಅಂದು ವಶಪಡಿಸಿಕೊಂಡ ಕಬ್ಬಿಣದ ಕೊಯಿತಾ, ಬಡಿಗೆ, ಒಡೆದ ಸಿಸಿ ಕ್ಯಾಮರಾ, ಕಬ್ಬಿಣದ ರಾಡು, ಒಂದು ಹಾರನ, ಒಡೆದ ಗೊಡೆ ಚೂರುಗಳನ್ನು ಈಗ ನೋಡುತ್ತಿದ್ದೆನೆ.  ಅವುಗಳನ್ನು ಕ್ರಮವಾಗಿ ಮು.ಮಾ.೧ ರಿಂದ ೬ ಎಂದು ಗುರುತಿಸಲಾಯಿತು.

ದಿ.೧೦.೧೦.೨೦೧೩ ರಂದು ಸಿ.ಪಿ.ಐ ಗುಲಬರ್ಗಾ ಇವರು ಸಿ.ಪಿ.ಐ ಎಮ.ಬಿ.ನಗರ ಕಛೇರಿಗೆ ಕರೆಸಿದ್ದರು.  ಆಗ ನಾನು ಮತ್ತು ಚಾಸಾ-೧೮ ಮತ್ತು ೧೯ ರವರು ಸಿ.ಪಿ.ಐ ಕಛೇರಿಗೆ ಹೋಗಿದ್ದೆವು.  ಸಿ.ಪಿ.ಐ ರವರು ಆರೋಪಿಗಳು ಸಿಕ್ಕಿದ್ದಾರೆ ಮತ್ತು ಕೆಲವು ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದೆವು ತಾವು ಬಂದು ಗುರುತಿಸಬೇಕೆಂದು ನಮ್ಮನ್ನು ಅಲ್ಲಿಗೆ ಕರೆಸಿದ್ದರು.  ಸಿ.ಪಿ.ಐ ರವರು ಬಂಗಾರದ ಕರಗಿಸಿದ ಗಟ್ಟಿಗಳು ಮತ್ತು ನಗದು ಹಣವನ್ನು ತೋರಿಸಿದರು.  ೪ ಜನ ಆರೋಪಿತರನ್ನು ತೋರಿಸಿ ಬ್ಯಾಂಕ ಲೂಟಿಮಾಡಿದರವರು ಇವರೆ ಎಂದು ನಮಗೆ ಹೇಳಿರುತ್ತಾರೆ. ಆರೋಪಿತರ ಹೆಸರುಗಳು ಅಬ್ದುಲ ಖಾದರ, ಮೈನೋದ್ದಿನ, ಸಿದ್ದು ಅಲಿಯಾಸ ರೇವಣಸಿದ್ದ ಮತ್ತು ರುಕ್ಮುದ್ದಿನ ಎಂದು ಹೇಳಿ ಅವರನ್ನು ತೋರಿಸಿರುತ್ತಾರೆ.  ಅಲ್ಲಿ ಇದ್ದ ಆರೋಪಿತರು ಕಳುವು ಮಾಡಿದವರು ನಮ್ಮ ಜೊತೆ ಇನ್ನೂ ೬-೭ ಜನ ಇದ್ದಾರೆ ಎಂದು ಪೋಲಿಸರಿಗೆ ನನ್ನ ಮುಂದೆ ತಿಳಿಸಿರುತ್ತಾರೆ.  ಸದರಿಯವರ ಹೆಸರನ್ನು ಸಹ ಆರೋಪಿತರು ತಿಳಿಸಿರುತ್ತಾರೆ ಆದರೆ ಈಗ ಹೆಸರುಗಳು ನನಗೆ ನೆನಪಿಲ್ಲ.

ನನಗೆ ಪೋಲಿಸರು ತೋರಿಸಿದ ನಗದು ಹಣ ಮತ್ತು ಬಂಗಾರದ ಗಟ್ಟಿ ಇರುವ ಭಾವಚಿತ್ರವನ್ನು ನಾನು ಈಗ ನೋಡುತ್ತಿದ್ದೆನೆ.  ಅದನ್ನು ನಿಪಿ-೨ ಎಂದು ಗುರುತಿಸಲಾಯಿತು.  ಈ ಕುರಿತು ಪೋಲಿಸರ ಮುಂದೆ ಪುರವಣಿ ಹೇಳಿಕೆ ನೀಡಿರುತ್ತೆನೆ.

ನಂತರ ದಿ.೧೪.೧೧.೨೦೧೩ ರಂದು ಪೋಲಿಸರು ಮತ್ತೆ ಸಿ.ಪಿ.ಐ ಕಛೇರಿ ಎಮ.ಬಿ.ನಗರಕ್ಕೆ ನಮ್ಮನ್ನು ಕರೆಸಿದ್ದರು.  ಕೃತ್ಯಕ್ಕೆ ಬಳಸಿದ ಟಾಟಾಸುಮೊ ಮತ್ತು ಐಶರಗೂಡಸ ವಾಹನವನ್ನು ಜಪ್ತಿ ಪಡಿಸಿಕೊಂಡಿದ್ದೆವೆ ಎಂದು ಹೇಳಿ ನಮಗೆ ತೋರಿಸಿದರು.  ಅದನ್ನು ನಾನು ನೋಡಿ ಗುರುತಿಸಿರುತ್ತೆನೆ.

ಇನ್ನೂ ಇಬ್ಬರು ಆರೋಪಿತರನ್ನು ಅಂದು ನಮಗೆ ತೋರಿಸಿರುತ್ತಾರೆ. ಅವರನ್ನು ನಾನು ನೋಡಿದರೆ ಗುರುತಿಸಬಲ್ಲೆ. ಈ ಕುರಿತು ಪುರವಣಿ ಹೇಳಿಕೆ ನೀಡಿರುತ್ತೆನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿತರು ತನಗೆ ಮೊದಲ ದಿನ ಅಂದರೆ ದಿ.೧೧.೧೧.೨೦೧೩ ರಂದು ತೋರಿಸಿದ ಆರೋಪಿತರು ನ್ಯಾಯಾಲಯದ ಮುಂದೆ ಇರುವ ಆರೋಪಿತರು ಎಂದು ಸಾಕ್ಷಿ ನುಡಿಯುತ್ತಾರೆ.

ಅಂದು ನನಗೆ ತೋರಿಸಿದ ಟಾಟಾಸುಮೊ ವಾಹನದ ಭಾವಚಿತ್ರಗಳನ್ನು ನೋಡುತ್ತಿದ್ದೆನೆ. ಅವುಗಳನ್ನು ನಿಪಿ-೩ ರಿಂದ ೮ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸಸಅ ರವರು ಸಮಯವಕಾಶ ಕೋರಿರುವುದರಿಂದ ಮುಂದೂಡಲಾಯಿತು)

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಆಳಂದ.